O.S.No. 273/2015 PW-1

ದಿನಾಂಕಃ **27-07-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಡಿಟಿ ವಕೀಲರಿಂದಃ

ತಿಪಪಯ್ಯನಿಗೆ ಇಬ್ಬರು ಗಂಡು ಮಕ್ಕಳು ಮಾತ್ರ ಇರುತ್ತಾರೆ ತಿಪ್ಪಯ್ಯನವರಿಗೆ ಕೆಂಚಮ್ಮ ಮತ್ತು ನಾರಾಯಣಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ತಿಪ್ಪಯ್ಯ 1966 ರಲ್ಲಿ ತೀರಿಕೊಂಡಿರುತ್ತಾರೆ. ತಿಪ್ಪಯ್ಯನವರಿಗೆ ಎಷ್ಟು ಪಿತ್ರಾರ್ಜಿತ ಆಸ್ತಿಗಳು ಮತ್ತು ಎಷ್ಟು ಸ್ವಯಾರ್ಜಿತ ಆಸ್ತಿಗಳು ಇದ್ದವು ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ತಿಪ್ಪಯ್ಯನವರಿಗೆ ಸ .ನಂ.182 ರಲ್ಲಿ 5 ಎಕರೆ ಪಿತ್ರಾರ್ಜಿತ ಆಸ್ತಿ ಮಾತ್ರ ಇತ್ತು ಎಂದು ಉತ್ತರಿಸಿರುತ್ತಾರೆ. ಕೆಂಚಮ್ಮನವರ ಹೆಸರಿನಲ್ಲಿ ಎಷ್ಟು ಪಿತ್ರಾರ್ಜಿತ ಆಸ್ತಿಗಳು ಮತ್ತು ಎಷ್ಟು ಸ್ವಯಾರ್ಜಿತ ಆಸ್ತಿಗಳು ಇದ್ದವು ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಕೆಂಚಮ್ಮನವರ ಹೆಸರಿನಲ್ಲಿ ಅವರ ಸ್ವಯಾರ್ಜಿತವಾದ 5 ಎಕರೆ ಜಮೀನು ಸ .ನಂ.188 ರಲ್ಲಿ ಇತ್ತು.

ನ್ಯಾಯಾಲಯದ ಪ್ರಶ್ನೆ ಃ ದಾವಾ ಸ್ವತ್ತು ಯಾರಿಗೆ ಸೇರಿರುತ್ತದೆ ಎಂದು ಈದಾವೆಯನ್ನು ಹೂಡಿರುತ್ತಾರೆ.

ಉತ್ತರಃ ದಾವಾ ಸ್ವತ್ತು ಕೆಂಚಮ್ಮನ ಸ್ವಯಾರ್ಜಿತ ಆಸ್ತಿ ಎಂದು ಈ ದಾವೆಯನ್ನು ಹೂಡಿರುತ್ತಾರೆ.

ತಿಪ್ಪಯ್ಯನವರಿಗೆ ವಾಸದ ಮನೆ ಇತ್ತು. ಪ್ರಸ್ತುತ ಸದರಿ ಮನೆ ಬಿದ್ದು ಹೋಗಿದ್ದು , ನಿವೇಶನ ಇರುತ್ತದೆ. ನನ್ನ ತಂದೆಗೆ ವಾಸದ ಮನೆ ಇರುತ್ತದೆ. ಪ್ರತಿವಾದಿಗೆ ವಾಸದ ಮನೆ ಇರುತ್ತದೆ. ಕೆಂಚಮ್ಮ 1966 ರಲ್ಲಿ ತೀರಿಕೊಂಡಿರುತ್ತಾರೆ. ಕೆಂಚಮ್ಮ-ತಿಪ್ಪಯ್ಯನವರ ಮರಣಾನಂತರ ವಾದಿ ಮತ್ತು ಪ್ರತಿವಾದಿ ಜಂಟೀ ಕುಟುಂಬದಲ್ಲಿದ್ದರು.

ತೊಂಡೊಟ್ಟಿ ಗ್ರಾಮದ ಸ .ನಂ.186 ರ ಖಾತೆ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ವೆಂಕಟಪ್ಪ-ನಾರಾಯಣಪ್ಪನವರು ಯೂವುದೇ ಕಾಲದಲ್ಲಿ ವಿಭಾಗ ಮಾಡಿಕೊಂಡಿರುವುದಿಲ್ಲ. 1983 ರಲ್ಲಿ ನಾರಾಯಣಪ್ಪನವರು ಜೀವಂತವಾಗಿದ್ದರು ಎಂದರೆ ಸರಿ. ನಾರಾಯಣಪ್ಪ ವಿದ್ಯಾಭ್ಯಾಸ ಮಾಡಿಲ್ಲ. ಸ .ನಂ.186 ರ ಖಾತೆಯನ್ನು ವಾದಿಯ ಹೆಸರಿಗೆ ವರ್ಗಾವಣೆ ಮಾಡಲು ಅವರೇ ತಹಶೀಲ್ದಾರ್ ಕಚೇರಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ಕಾರದಿಂದ ಅವರ ಹೆಸರಿಗೆ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನಿನ ಖಾತೆ ಬಗರ್ ಹುಕ್ಕುಂ ಆಧಾರದ ಮೇಲೆ ಖಾತೆ ಬದಲಾವಣೆಯಾಗಿರುತ್ತದೆ. ಸದರಿ ಸ್ವತ್ತಿನ ಖಾತೆ ವರ್ಗಾಣೆಯಾದ ದಿನದಿಂದ ಅವರು ತೀರಿಕೊಳ್ಳುವವರೆಗೂ ಸದರಿ ಸ್ವತ್ತಿನ ಖಾತೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

1983 ರಿಂದ ವಾದಿ ತೀರಿಕೊಳ್ಳುವವರೆಗೂ ಸ.ನಂ.188 ರ ಖಾತೆಯನ್ನು ನೋಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ನಾನು ಸುಮಾರು 25 ವರ್ಷಗಳಿಂದ ಸ.ನಂ.188 ರ ಖಾತೆಯನ್ನು ನೋಡುತ್ತಿದ್ದೇನೆ ಎಂದರೆ ಸರಿ. ಸುಮಾರು 25 ವರ್ಷಗಳಿಂದ ಸ.ನಂ.188 ರ ಖಾತೆ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ಖಾತೆ ಎಂ ಆರ್ ನಂ.355/83-84 ರಂತೆ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಎಂ ಆರ್ ನಂ.355/83-84 ನ್ನು ನಾನು 25 ವರ್ಷಗಳಿಂದ ನೋಡುತ್ತಿದ್ದೇನೆ.

ಅರ್ಜಿದಾರರ ತಂದೆಗೆ ಇಬ್ಬರು ಮಕ್ಕಳಿದ್ದು , ಇದರಲ್ಲಿ ನಾರಾಯಣಪ್ಪ ಎಂಬುವರು ತಮ್ಮ ಅರ್ಜಿದಾರನಿಂದ ವೆಂಕಟಪ್ಪ ಇವರಿಗೆ ಖಾತೆ ಬದಲಾವಣೆ ಮಾಡಬಹುದೆಂದು ಶ್ರುತ ಎಂಬ ಷರಾದ ಮೇರೆಗೆ ಎಂ ಆರ್ ನಂ.355/83-84 ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಯಾವ ಆಧಾರದ ಮೇರೆಗೆ ಖಾತೆ ಪ್ರತಿವಾದಿಯ ಹೆಸರಿಗೆ

ವರ್ಗಾಣೆಯಾಗಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಪ್ರತಿವಾದಿ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ವಾದಿಗೆ ತಿಳಿಯದಂತೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ಪ್ರತಿವಾದಿ 2015 ರಲ್ಲಿ ಐ.ಡಿ.ಹಳ್ಳಿಯ ಎಸ್ ಬಿ ಎಂ ಬ್ಯಾಂಕ್ ಗೆ ಬೋಗ್ಯ ಮಾಡಿ 4 ಲಕ್ಷ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಸಾಲ ಪಡೆದುಕೊಳ್ಳುವ ಸಮಯದಲ್ಲಿ ವಾದಿ ಅಥವಾ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಎಂ ಆರ್ ನಂ.355/83-84 ನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ.

1983-84 ರಿಂದ ದಾವಾ ಸ್ವತ್ತಿನ ಸಂಪೂರ್ಣ ಹಕ್ಕನ್ನು ಪ್ರತಿವಾದಿಯೇ ಚಲಾಯಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. 1983-84 ರ ವೇಳೆಗೆ ಆಗಲೇ ಸ.ನಂ.186 ನನ್ನ ತಂದೆಗೆ ಮಂಜೂರಾಗಿತ್ತು ಎಂದರೆ ಸರಿ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿ ಅನ್ಯೋನ್ಯವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ.

ವಾದಿ ಮತ್ತು ಪ್ರತಿವಾದಿ ಮೌಖಿಕವಾಗಿ ಸ.ನಂ.186 ವಾದಿಯ ಪಾಲಿಗೆ , ಸ.ನಂ.188 ಪ್ರತಿವಾದಿಯ ಪಾಲಿಗೆ ಎಂದು ಮೌಖಿಕವಾಗಿ ಹಂಚಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿ ದಿಃ 31-03-2018 ರಲ್ಲಿ ನಾರಾಯಣಪ್ಪ ಮತ್ತು ಮುನಿಯಕ್ಕಮ್ಮ ಮತ್ತು ಇತರರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾರಾಯಣಪ್ಪ ಮತ್ತು ಮುನಿಯಕ್ಕಮ್ಮ ಮತ್ತು ಇತರರು ಅವರು ಖರೀದಿ ಮಾಡಿದ ಸ್ವತ್ತನ್ನು ದಿಃ 07-12-2018 ರಂದು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಸ್ವಾಧೀನವು ದಿಃ 31-03-2018 ರಂದು ನಾರಾಯಣಪ್ಪ ಮತ್ತು ಮುನಿಯಕ್ಕಮ್ಮ ಮತ್ತು ಇತರರ ಸುಬರ್ದಿಗೆ ಹೋಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

1983 ರಿಂದ ದಿಃ 31-03-2018 ರವರೆಗೆ ಪ್ರತಿವಾದಿಯೇ ಪ್ರತ್ಯೇಕವಾಗಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಮತ್ತು ವಿಭಾಗಕ್ಕೆ ಒಳಪಡುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

1983-84 ನೇ ಸಾಲಿನಿಂದ ಈ ದಾವೆಯನ್ನು ಹೂಡುವ ದಿನದವರೆಗೂ ವಾದಿ ಮತ್ತು ಪ್ರತಿವಾದಿಯ ಮಧ್ಯೆ ಒಟ್ಟು ಕುಟುಂಬ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಅಥವಾ ನನ್ನ ತಂದೆಗೆ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ